

ಯಾಕೋ ಲೇಟ್ ಆಯಿತು ಅಂತ ದಡಬಡ ಎದ್ದೆ. ಹಾಲಿನವ ಕೂಗಿದ. ಮುಖ ಸಹಿತ ತೊಳೆಯದೇ ಓಡಿ ಹೋಗಿ ಹಾಲು ಹಾಕಿಸಿಕೊಂಡು..."

ಅವಳ ಮಾತನ್ನು ಅರ್ಧಕ್ಕೇ ತಡೆಯುತ್ತಾ ನಾಗರಾಜಯ್ಯ "ಹಾಲು ಹಾಕಿಸಿಕೊಂಡು ಅಂದರೆ ಪ್ಯಾಕೆಟ್ ಹಾಲು ಅಲ್ಲವಾ?"

"ಇಲ್ಲಾ ಸಾರ್, ಸಾಹೇಬರಿಗೆ ಹಸುವಿನ ಹಾಲೇಬೇಕಿತ್ತು. ಹಾಗಾಗಿ ಇಲ್ಲೆ ಮುಂದಿನ ಬೀದಿಯಲ್ಲಿ ಹಾಲಿನವನು ಇದ್ದಾನೆ. ಅವನೇ ದಿನಾ ಬೆಳಗ್ಗೆ ಬಂದು ಹಾಲು ಹಾಕಿ ಹೋಗುತ್ತಾನೆ. ಸಾಹೇಬರು ಹೋಗಿಬಿಟ್ಟರು ಅಂತ ಕೇಳಿ ಬಂದಿದ್ದಾನೆ. ಇಲ್ಲೆ ಕೆಳಗಡೆ ಇದ್ದಾನೆ ಸರ್".

ಅಲ್ಲಿಯೇ ಇದ್ದ ಪೇದೆಯೊಬ್ಬನಿಗೆ ಆ ಹಾಲಿನವ ಯಾರೆಂದು ತಿಳಿದು ಕರೆದುಕೊಂಡು ಬರಲು ಹೇಳಿ, "ಹಾಲು ಹಾಕಿಸಿಕೊಳ್ಳುವಾಗ ಅಥವಾ ನಂತರ ಏನಾದರೂ ಶಬ್ದ ಕೇಳಿಸಿತಾ" ಎಂದು ಅವಳನ್ನು ಕೇಳಿದರು.

"ಇಲ್ಲಾ ಸಾರ್ ನನಗೆ ಏನೂ ಕೇಳಿಸಲಿಲ್ಲ. ಹಾಗೇ ನನಗೆ ಕಿವಿ ಸ್ವಲ್ಪ ಮಂದ. ಕೇಳಿಸದಿರಲಿಕ್ಕೂ ಸಾಕು'' ಎಂದಳು.